# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ/955/2020/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 7/9/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ಜಿ.ನರಸಿಂಹಮೂರ್ತಿ, ರಾಜಸ್ವ ನಿರೀಕ್ಷಕರು, ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, – ಇವರು ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಬಿ.ಆನಂದ ಬಿನ್ ದೊಡ್ಡಬೈರಪ್ಪ, ವಂಟೂರು ಗ್ರಾಮ, ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಜಿ.ನರಸಿಂಹಮೂರ್ತಿ, ರಾಜಸ್ವ ನಿರೀಕ್ಷಕರು, ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) ದೂರುದಾರರು ತಮ್ಮ ದೂರಿನಲ್ಲಿ ದಿ.5/9/2018 ರಂದು ಶಿಡ್ಲಘಟ್ಟ ತಾಲ್ಲೂಕು, ಬಶೆಟ್ಟಿಹಳ್ಳಿ ಹೋಬಳಿ ನಾಡ ಕಚೇರಿಯಲ್ಲಿ ಎದುರುದಾರರು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅನುಚಿತವಾಗಿ ವರ್ತಿಸಿ ಗಲಾಟೆ ಮಾಡುತ್ತಿರುವಾಗ ಪ್ರಸ್ತುತ ದೂರುದಾರರು ಯಾಕೆ ಗಲಾಟೆ ಮಾಡುತ್ತಿದ್ದೀರಿ, ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದೀರಿ ಎಂದು ಕೇಳಿದಾಗ, ದೂರುದಾರರೊಂದಿಗೆ ಗಲಾಟೆ ಮಾಡಿ, ನಾಡ ಕಚೇರಿಯಿಂದ ಹೊರಗೆ ತಳ್ಳಿರುತ್ತಾರೆ. ಅಲ್ಲಿ ಸೇರಿದ್ದ ಜನರು ಮತ್ತು ಸಾರ್ವಜನಿಕರು ಸದರಿ ಎದುರುದಾರರಿಗೆ ಈ ರೀತಿ ಗಲಾಟೆ ಮಾಡುವುದು ಸರಿಯಲ್ಲ ಎಂದು ಹೇಳಿದಾಗ ಅಲ್ಲಿದ್ದ ಜನರಿಗೂ ಹಾಗೂ ಸಾರ್ವಜನಿಕರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. ನಾಡ ಕಚೇರಿಯಲ್ಲಿ ಕಡತವನ್ನು ಪರಿಶೀಲಿಸಿ ಯಾವುದಾದರೂ ದಾಖಲಾತಿ ಬೇಕಾದಲ್ಲಿ ಲಂಚ ಕೊಟ್ಟರೆ ಮಾತ್ರ ಮಾಡಿಕೊಡುತ್ತಾರೆ. ಅದೇರೀತಿ, ಕಚೇರಿಯಲ್ಲಿ ಕುಳಿತು ಧೂಮಪಾನ, ಮಧ್ಯಪಾನ ಮಾಡಿಕೊಂಡು ಕಚೇರಿಗೆ ಬರುತ್ತಾರೆ ಎಂದು ಸಾರ್ವಜನಿಕರಿಂದ ಎದುರುದಾರರ ಮೇಲೆ ದೂರಿರುತ್ತಾರೆ. ಆ ಕುರಿತು ಸಾಕ್ಷಿಯಾಗಿ ದಿ.2/10/2019 ರಂದು ಶಿಡ್ಲಘಟ್ಟ ತಾಲ್ಲೂಕು ಕಚೇರಿಯ ಕಂದಾಯ ಭವನದಲ್ಲಿ ಸ್ವಚ್ಛತೆ ಕಾರ್ಯ ಮಾಡುತ್ತಿರುವಾಗ ಗ್ರಾಮ ಸಹಾಯಕನ ಮೇಲೆ ಇಟ್ಟಿಗೆ ತೆಗೆದುಕೊಂಡು ಹೊಡೆಯಲು ಮುಂದಾಗಿ, ಅವಾಚ್ಯ ಶಬ್ದಗಳಿಂದ ನಿಂದಿಸಿರುವ ದೃಶ್ಯ ಸಿ.ಡಿ.ಯಲ್ಲಿ

ಕಂಡುಬರುತ್ತದೆ. ಸಿ.ಡಿ.ಯ ಪ್ರತಿಯನ್ನು ಈಗಾಗಲೇ ದೂರುದಾರರು ತಹಶೀಲ್ದಾರ್, ಶಿಡ್ಲಘಟ್ಟ ರವರಲ್ಲಿ ಎದುರುದಾರರ ವಿರುದ್ಧ ದೂರು ಕೊಟ್ಟ ಸಮಯದಲ್ಲಿ ಹಾಜರುಪಡಿಸಿರುತ್ತಾರೆ. ಸದರಿ ಎದುರುದಾರರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಪ್ರಸ್ತುತ ದೂರುದಾರರು ಕೋರಿರುತ್ತಾರೆ.

3) ಸದರಿ ದೂರಿನ ಜೊತೆಗೆ ಸದರಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಜೈ ಕಿರಣ್ ನ್ಯೂಸ್ ಶಿಡ್ಲಘಟ್ಟ ಪತ್ರಿಕೆಯಲ್ಲಿ ಸಹ ಎದುರುದಾರರ ಅನುಚಿತ ವರ್ತನೆಯ ಕುರಿತು ಪ್ರಕಟವಾದ ಪತ್ರಿಕೆಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ದಿ.12/12/2019 ರಂದು ತಹಶೀಲ್ದಾರ್, ಶಿಡ್ಲಘಟ್ಟ, ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ, ಮಾನ್ಯ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ, ಇವರಿಗೆ ಸದರಿ ಎದುರುದಾರರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಸಲ್ಲಿಸಿದ ಅರ್ಜಿಯ ಪ್ರತಿಗಳನ್ನು ದೂರುದಾರರು ಹಾಜರುಪಡಿಸಿರುತ್ತಾರೆ.

4) ಎದುರುದಾರರು ದಿ.24/7/2020 ರಂದು ಆಕ್ಷೇಪಣೆ ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಪಟ್ಟಂತೆ ದೂರಿನ ಎಲ್ಲಾ ಸಂಗತಿಗಳನ್ನು ನಿರಾಕರಿಸಿದ್ದು, ತಳ್ಳಿಹಾಕಿರುತ್ತಾರೆ. ಸದರಿಯವರು ಕೆಲವೇ ತಿಂಗಳಿನಲ್ಲಿ ನಿವೃತ್ತಿಯ ಅಂಚಿನಲ್ಲಿದ್ದು, ಆತನ ಪೂರ್ಣ ಸೇವಾವಧಿಯಲ್ಲಿ ಯಾವುದೇ ಸಾರ್ವಜನಿಕರು ಇಲ್ಲಸಲ್ಲದ ಆರೋಪ ಮಾಡಿರುವುದಿಲ್ಲ. ಪ್ರಸ್ತುತ ದೂರುದಾರರು ಒಬ್ಬ ಸಾರ್ವಜನಿಕ ಸೇವಕನೆಂದು ಹೇಳಿಕೊಳ್ಳುತ್ತಾ, ಎಲ್ಲಾ ವಯಸ್ಸಿನ ಅರ್ಹರಾದ ಹಾಗೂ ಅನರ್ಹರಾಗುವವರಿಗೆಲ್ಲಾ ಸರ್ಕಾರದಿಂದ ಮಾಸಿಕ ಪಿಂಚಣಿ ಮಾಡಿಸುವುದಾಗಿ ಭರವಸೆ ಕೊಟ್ಟು ಅವರ ಭಾವಚಿತ್ರಗಳನ್ನು ಸಾವಿರಾರು ರೂಪಾಯಿ ಹಣ ಪಡೆದು ಕಚೇರಿಯ ಸಿಬ್ಬಂದಿಗೆ ಹಣ ಕೊಟ್ಟು ಪಿಂಚಣಿಗಳನ್ನು ಮಂಜೂರು ಮಾಡಿಸಿಕೊಡುವುದಾಗಿ ನಂಬಿಸಿ, ಎಲ್ಲಾ ಅರ್ಜಿಗಳನ್ನು ತಾನೇ ತಂದು ನಾಡಕಚೇರಿಯ ಗಣಕ ಕೇಂದ್ರದಲ್ಲಿ ಸಲ್ಲಿಸುತ್ತಿರುವುದು ತಿಳಿದುಬಂದಿರುತ್ತದೆ. ಸದರಿ ಅರ್ಜಿಗಳನ್ನು ಪರಿಶೀಲಿಸಿ, ಸದರಿ ಎದುರುದಾರರು ಅರ್ಹರಾದವರಿಗೆ ಪಿಂಚಣಿ ಮಂಜೂರು ಮಾಡುವಂತೆಯೂ, ಅನರ್ಹರಾದ ಅರ್ಜಿಗಳನ್ನು ತಿರಸ್ಕರಿಸುವಂತೆ ಶಿಫಾರಸ್ಸು ಮಾಡುತ್ತಿರುತ್ತಾರೆ. ಇಂತಹ ತಿರಸ್ಕೃತ ಅರ್ಜಿದಾರರ ಪರವಾಗಿ ದೂರುದಾರರು ಸದರಿ ಕಚೇರಿಗೆ ಬಂದು, ಸದರಿ ಎದುರುದಾರರ ಕರ್ತವ್ಯಕ್ಕೆ ಯಾವುದೇ ಕಾರಣವಿಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದು, ಆತನ ವಿರುದ್ಧ ಮೇಲಾಧಿಕಾರಿಗಳಿಗೆ ದೂರು ನೀಡಿರುತ್ತಾರೆ. ಆ ಸಮಯದಲ್ಲಿ ಎದುರುದಾರರನ್ನು ವರ್ಗಾವಣೆ ಮಾಡಿಸುತ್ತೇನೆ, ಅಮಾನತ್ತು ಮಾಡಿಸುತ್ತೇನೆ ಎಂದು ಬೆದರಿಸುತ್ತಿರುತ್ತಾರೆ. ಈ ಸಂಗತಿಯ ಕುರಿತು ಪೊಲೀಸ್ ಠಾಣೆಗೆ ವರದಿ ನೀಡಿರುತ್ತೇನೆ, ತಹಶೀಲ್ದಾರ್‌ರವರಿಗೂ ವರದಿ ಸಲ್ಲಿಸಿರುತ್ತೇನೆ. ಸದರಿ ದೂರುದಾರರು ತನ್ನ ಮೇಲೆ ಸೇಡು ತೀರಿಸಿಕೊಳ್ಳಲು ಉದ್ದೇಶಿಸಿ ಸುಳ್ಳು ದೂರು ಸಲ್ಲಿಸಿರುತ್ತಾರೆ. ಸದರಿ ಎದುರುದಾರರು

ದೂರುದಾರರ ಅನರ್ಹ ಅರ್ಜಿಗಳನ್ನು ತಿರಸ್ಕರಿಸಿದ್ದನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಮಾನಸಿಕ ಕಿರುಕುಳದಿಂದ ಹೃದಯ ರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದು, ನಿವೃತ್ತಿ ಅಂಚಿನಲ್ಲಿರುವುದರಿಂದ, ದೂರುದಾರರ ದೂರನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

5) ಈ ಮೇಲೆ ಹೇಳಿದಂತೆ ಎದುರುದಾರರು ದೂರುದಾರರ ಮೇಲೆ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ತನ್ನ ಸರ್ಕಾರಿ ಕೆಲಸದಲ್ಲಿ ಅಡತಡೆ ಉಂಟುಮಾಡಿರುತ್ತಾರೆಂದು ಅಪರಾಧ ಸಂ.207/2018 ಕಲಂ 353, 504 ಐಪಿಸಿ ರಂತೆ ದೂರು ಸಲ್ಲಿಸಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಶಿಡ್ಲಘಟ್ಟ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅಂತಿಮ ವರದಿ ಸಿ.ಸಿ.ನಂ.202/2018 ರ ಪ್ರತಿಯನ್ನು ತಮ್ಮ ಆಕ್ಷೇಪಣೆಯೊಂದಿಗೆ ಹಾಜರುಪಡಿಸಿರುತ್ತಾರೆ.

6) ದೂರುದಾರರು ಎದುರುದಾರರು ಸಲ್ಲಿಸಿದ ಆಕ್ಷೇಪಣೆಗೆ ದಿ.10/2/2021 ರಂದು ಪ್ರತ್ಯುತ್ತರ ಸಲ್ಲಿಸಿದ್ದು, ದೂರಿನಲ್ಲಿರುವ ಆಪಾದನೆಗಳನ್ನೇ ಪುನರುಚ್ಚರಿಸಿರುತ್ತಾರೆ.

7) ಪ್ರಸ್ತುತ ಪ್ರಕರಣದಲ್ಲಿ ದೂರುದಾರರು ಎದುರುದಾರರ ವಿರುದ್ಧ ಆಪಾದನೆ ಮಾಡಿರುವುದನ್ನು ಪರಿಗಣಿಸಿ, ದೂರು ದಾಖಲಿಸುವುದಕ್ಕಿಂತ ಪೂರ್ವದಲ್ಲಿ ತಹಶೀಲ್ದಾರ್‌ರವರಿಗೆ, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಯವರಿಗೆ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಿದ್ದರಿಂದ, ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರಿಗೆ ಎದುರುದಾರರ ವಿರುದ್ಧ ವರದಿ ಸಲ್ಲಿಸುವಂತೆ ಆದೇಶಿಸಲಾಗಿದ್ದು, ಅದರಂತೆ, ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರು ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್‌ರವರಿಗೆ ದೂರುದಾರರ ಆಪಾದನೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಆದೇಶಿಸಿರುತ್ತಾರೆ.

8) ತಹಶೀಲ್ದಾರ್, ಚಿಕ್ಕಬಳ್ಳಾಪುರ ಇವರು ದಿ.24/1/2020 ಮತ್ತು ದಿ.20/3/2020 ರಂದು ಎದುರುದಾರರ ಮೇಲಿನ ಆಪಾದನೆಗೆ ಸಂಬಂಧಿಸಿದಂತೆ, ಸರಿಯಾಗಿ ಕರ್ತವ್ಯ ನಿರ್ವಹಿಸುವುದಿಲ್ಲ ಎನ್ನುವ ಕುರಿತು ದಿ.2/10/2019 ರಂದು ಶಿಡ್ಲಘಟ್ಟ ತಾಲ್ಲೂಕು ಕಚೇರಿಯ ಕಂದಾಯ ಭವನದಲ್ಲಿ ಸ್ವಚ್ಛತೆ ಕಾರ್ಯ ಮಾಡುತ್ತಿರುವಾಗ ಗ್ರಾಮ ಸಹಾಯಕನ ಮೇಲೆ ಇಟ್ಟಿಗೆ ತೆಗೆದುಕೊಂಡು ಬಂದು ಹೊಡೆಯಲು ಮುಂದಾದಾಗ, ಗ್ರಾಮ ಸಹಾಯಕನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ದೃಶ್ಯದ ವಿಡಿಯೋವನ್ನು ಪ್ರಸ್ತುತ ಅರ್ಜಿದಾರರು ಅರ್ಜಿಯೊಂದಿಗೆ ಲಗತ್ತಿಸಿ, ಸದರಿ ಸಿ.ಡಿ.ಯಲ್ಲಿ ಎದುರುದಾರನ ವ್ಯಕ್ತಿತ್ವ ಹಾಗೂ ರೌಡಿಯ ಲಕ್ಷಣಗಳು ಕಂಡುಬಂದಿರುತ್ತದೆ ಹಾಗೂ ಸುದ್ದಿ ಮಾಧ್ಯಮದಲ್ಲಿ ಪ್ರಸಾರವಾಗಿರುತ್ತದೆ ಎಂದು ದೂರುದಾರರು ದೂರಿರುತ್ತಾರೆ. ಆದುದರಿಂದ ರಾಜಸ್ವ ನಿರೀಕ್ಷಕರು ಗ್ರಾಮ ಸಹಾಯಕನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆ ಕುರಿತು ಸದರಿ

ಎದುರುದಾರರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ ಕಲಂ 3(i)(ii)(iii) ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇರೀತಿ ಸದರಿ ಎದುರುದಾರರನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಶಿಡ್ಲಘಟ್ಟ ತಾಲ್ಲೂಕಿನಿಂದ ವರ್ಗಾವಣೆ ಮಾಡಲು ಕೋರುತ್ತೇವೆ ಎಂದು ತಹಶೀಲ್ದಾರ್‌ರವರು ವರದಿ ನೀಡಿರುತ್ತಾರೆ.

9) ಅಪರ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರು ದಿ.12/11/2020 ರಂದು ದಿ.19/9/2020 ರ ಪತ್ರದಲ್ಲಿ ಉಪ ವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ ಇವರು ಸಲ್ಲಿಸಿರುವ ದಿ.22/6/2020 ರ ವರದಿಯ ಆಧಾರದ ಮೇಲೆ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂ.ಕಂಇ 163 ಬಿಎಸ್‌ಐ 2020 ದಿ.5/10/2020 ರಂತೆ ಶ್ರೀ.ಕೆ.ಎನ್.ವೇಣುಗೋಪಾಲ್ ಪ್ರ.ದ.ಸಹಾಯಕರು, ತಾಲ್ಲೂಕು ಕಚೇರಿ, ಚಿಕ್ಕಬಳ್ಳಾಪುರ ತಾಲ್ಲೂಕು, ಇವರನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಶಿಡ್ಲಘಟ್ಟ ತಾಲ್ಲೂಕು, ಬಶೆಟ್ಟಿಹಳ್ಳಿ ಹೋಬಳಿ, ಶ್ರೀ.ಜಿ.ನರಸಿಂಹಮೂರ್ತಿ, ರಾಜಸ್ವ ನಿರೀಕ್ಷಕರು ಇವರಿಂದ ತೆರವಾದ ಹುದ್ದೆಗೆ ವರ್ಗಾಯಿಸಿ ಆದೇಶಿಸಿರುತ್ತದೆ. ಅದರಂತೆ ಶ್ರೀ.ಜಿ.ನರಸಿಂಹಮೂರ್ತಿ, ರಾಜಸ್ವ ನಿರೀಕ್ಷಕರು, ಬಶೆಟ್ಟಿಹಳ್ಳಿ, ಶಿಡ್ಲಘಟ್ಟ ತಾಲ್ಲೂಕು ಇವರು ದಿ.23/10/2020 ರಂದು ಕರ್ತವ್ಯದಿಂದ ಬಿಡುಗಡೆಹೊಂದಿ ದಿ.29/10/2020 ರಂದು ಜಿಲ್ಲಾಧಿಕಾರಿ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾರ್ಯ ವರದಿ ಮಾಡಿಕೊಂಡಿರುತ್ತಾರೆ. ಆದ್ದರಿಂದ, ನೌಕರರ ವಿರುದ್ಧ ನೀಡಿರುವ ದೂರು ಅರ್ಜಿಯನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

10) ಪ್ರಸ್ತುತ ಪ್ರಕರಣದಲ್ಲಿ ದಿ.12/11/2020 ರ ಜಿಲ್ಲಾಧಿಕಾರಿಯವರ ವರದಿಯಂತೆ ಎದುರುದಾರರ ವಿರುದ್ಧ ದೂರುದಾರರ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಎದುರುದಾರರ ವಿರುದ್ಧ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ರವರು ಕರ್ತವ್ಯಲೋಪ ಎಸಗಿರುತ್ತಾರೆ ಎನ್ನುವ ಕುರಿತು ಎದುರುದಾರರನ್ನು ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು ಇಲ್ಲಿಂದ ದಿ.23/10/2020 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿ ದಿ.29/10/2020 ರಂದು ಜಿಲ್ಲಾಧಿಕಾರಿಯವರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಾರ್ಯ ವರದಿ ಮಾಡಿಕೊಳ್ಳುವಂತೆ ಆದೇಶಿಸಿರುತ್ತಾರೆ. ಆದರೆ ಎದುರುದಾರರ ವಿರುದ್ಧ ದೂರಿಗೆ ಸಂಬಂಧಿಸಿದ ಆಪಾದನೆಗಳ ಕುರಿತು ಯಾವುದೇ ತನಿಖೆ ನಡೆಸಿರುವುದಿಲ್ಲ.

11) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ,

ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

12) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(i)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಹಾಗೂ **ಎದುರುದಾರರು ದಿ.31/7/2021 ರಂದು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/9/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.